## ಕನ್ನಡಪ್ರಭ ದಿನಪತ್ರಿಕೆ 13-06-2016



ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪದಲ್ಲಿ ಪ್ರೊ.ಕೆ. ಭೈರಪ್ಪ, ಪದ್ಮಭೂಷಣ ಡಾ.ಎಂ. ಮಹದೇವಪ್ಪ, ಪ್ರೊ.ಎಂ. ಮಹದೇವಪ್ಪ, ಡಾ.ಎಂ.ಪಿ. ಸೋಮಶೇಖರ್, ಎಂ.ಎಸ್. ವೆಂಕಟರಾವ್ ಇದ್ದರು.

## ಮೈಸೂರು ಮಿತ್ರ ದಿನಪತ್ರಿಕೆ 14-06-2016

# ಜ್ಞಾನದ ವಿಕಸನ ಅಂತರಂಗವನ್ನು ತಾಗಬೇಕು : ಪ್ರೊ. ಕೆ. ಭೈರಪ್ಪ



ಮೈಸೂರು, ಜೂ. 13– ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ ನಡೆಯಿತು.

ಸಮಾರಂಭದಲ್ಲಿ ಭಾಗವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ. ಭೈರಪ್ಪ ಮಾತನಾಡಿ, ವಿದ್ಯಾದಾನವು ಶ್ರೇಷ್ಠವಾದುದು. ಜೆಎಸ್‌ಎಸ್ ಮಾದರಿ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಮಾಡಬೇಕೆಂದುಕೊಂಡ ಅದೆಷ್ಟೋ ಪ್ರಯೋಗಗಳು ಜೆಎಸ್‌ಎಸ್‌ನಲ್ಲಿ ಮೊದಲು ಆರಂಭಗೊಳ್ಳುತ್ತವೆ. ಪ್ರಾಧ್ಯಾಪಕರ ಸಮರ್ಪಣಾ ಮನೋಭಾವ, ಕಾರ್ಯಪ್ರವೃತ್ತಿ ಸಂಸ್ಥೆಗೆ ಆದರ್ಶಪ್ರಾಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಜ್ಞಾನ ಮತ್ತು ಆಧ್ಯಾತ್ಮಿಕತೆ ಎರಡರ ಸಂಗಮವಾಗಿ ಅವರು ಬದುಕು ಸುಂದರಗೊಳ್ಳುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿ.ಪಂ. ಉಪಾಧ್ಯಕ್ಷ ಜಿ. ನಟರಾಜ್ ಅವರು, ಜೆಎಸ್‌ಎಸ್ ಸಂಸ್ಥೆ ನಡೆದು ಬಂದ ಹಾದಿ ಹಾಗೂ ಅದರ ಸಾಧನೆ, ಹಿರಿಮೆಯನ್ನು ಶ್ಲಾಘಿಸಿದರು. ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠ ಗ್ರಾಮೀಣಾಭಿವೃದ್ಧಿ ವಿಭಾಗದ ನಿರ್ದೇಶಕ ಡಾ. ಎಂ. ಮಹದೇವಪ್ಪ ಮಾತನಾಡಿ, ರೈತರು ಹಾಗೂ ವಿದ್ಯಾರ್ಥಿಗಳು ದೇಶದ ಭವಿಷ್ಯದ ಹರಿಕಾರರು. ದೇಶದ ಅಭಿವೃದ್ಧಿಗಾಗಿ ಗ್ರಾಮೀಣ ಪ್ರದೇಶದಲ್ಲಿನ ಸುಧಾರಣೆ ಹಾಗೂ ಗಾಂಧೀಜಿಯವರ ತತ್ವಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ. ಮಹದೇವಪ್ಪ, ಸ್ನಾತಕೋತ್ತರ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಂಚಾಲಕರಾದ ಡಾ. ಎಂ.ಪಿ. ಸೋಮಶೇಖರ್ ಮತ್ತು ಎಂ.ಎಸ್. ವೆಂಕಟರಾವ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ರಚಿತಪ್ರಭು ಪ್ರಾರ್ಥಿಸಿದರು. ಚೈತನ್ಯ ಸ್ವಾಗತಿಸಿದರು. ಬಿ.ಎಂ. ಗುರುಸ್ವಾಮಿ ವಂದಿಸಿದರು. ಜಾಹ್ನವಿ ಎಸ್. ಕಾರ್ಯಕ್ರಮ ನಿರೂಪಿಸಿದರು.